<u>**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**</u>

ಎಸ್.ಸಿ ಸಂಖ್ಯೆ:- **93/2021**

| | | |
|---|---|---|
| ಸಾಕ್ಷಿದಾರನ ಹೆಸರು | : ಲಕ್ಷ್ಮೀಕಾಂತ್ ತಳವಾರ್ | ಪಿ.ಡಬ್ಲ್ಯೂ-31 |
| ತಂದೆಯ /ಗಂಡನ ಹೆಸರು | : ಲೇಟ್ ಕರಿಯಪ್ಪ | ಸಿ.ಡಬ್ಲ್ಯೂ-63 |
| ವಯಸ್ಸು | : 44 ವರ್ಷ | |
| ಉದ್ಯೋಗ | :ಪಿ.ಐ ಎನ್. ಆರ್ ಠಾಣೆ | |
| ವಾಸಸ್ಥಳ | : ಮೈಸೂರು | |

<u>**ಸಾಕ್ಷಿಯನ್ನು ಈ ದಿನ ದಿ: 27.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**</u>

1. ದಿ:– 28.01.2023 ರಿಂದ ಎನ್.ಆರ್ ಪೊಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ದಿ:– 28.01.2023 ರಂದು ಪ್ರಕರಣದ ಕಡತವನ್ನು ಚಾ.ಸಾ:48 ರವರಿಂದ ಪಡೆದುಕೊಂಡು ಪರಿಶೀಲಿಸಿದಾಗ, ಕೆಲವು ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸದೇ ಇರುವುದು ಕಂಡು ಬಂದಿದ್ದು, ನಾನು ಸದರಿ ದಾಖಲೆಗಳನ್ನು ಪರಿಶೀಲಿಸಿ 17 ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಮನವಿ ಜೊತೆಗೆ ಹೆಚ್ಚುವರಿ ದೋಷಾರೋಪಣಾ ಪತ್ರದ ಜೊತೆಗೆ ನೀಡಿರುತ್ತೇನೆ ಹಾಗೂ ದಾಖಲಾತಿಗಳನ್ನು ನೀಡಿದ ಸಾಕ್ಷಿದಾರರಾದ ಮಣಿಕಂಠ ಬಿನ್ ದೊರೆರವರ

ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡು ಅವರ ಹೇಳಿಕೆಯನ್ನು ಸಹ ಹೆಚ್ಚುವರಿ ದೋಷಾರೋಪಣಾ ಪತ್ರದ ಜೊತೆಗೆ ಸಲ್ಲಿಸಿರುತ್ತೇನೆ. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ಅದರಲ್ಲಿ ನನ್ನ ಹಿಂದಿನ ತನಿಖಾಧಿಕಾರಿಯವರು ಮುಖ್ಯೋಪಾಧ್ಯಯರು, ಇನ್ಸಟಿಟ್ಯೂಟ್ ಅಪ್ ಎಜುಕೇಷನ್ ಶಾಲೆ, ರಾಜೇಂದ್ರ ನಗರ ರವರಿಗೆ ಅಪ್ಪು ಬಿನ್ ಮಹೇಂದ್ರ ಕುಮಾರ್ ಆತನ ವಯಸ್ಸಿನ ದೃಡೀಕರಣ ದಾಖಲೆಯನ್ನು ನೀಡುವಂತೆ ಸಲ್ಲಿಸಿದ ಮನವಿ ಪತ್ರ ಆಗಿರುತ್ತದೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–94 ಎಂದು ಗುರುತಿಸಲಾಯಿತು.

3. ಮೈಸೂರು ಆರ್.ಎಪ್.ಎಸ್.ಎಲ್ ಗೆ ಪ್ರಕರಣದಲ್ಲಿ ವೈದ್ಯರು ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿಕೊಟ್ಟ ವಿಸೆರಾ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮನವಿ ಪತ್ರ ವಾಗಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–95 ಎಂದು ಗುರುತಿಸಲಾಯಿತು. ನಂತರ ಸ್ವೀಕೃತಿಯನ್ನು ಆರ್.ಎಪ್.ಎಸ್.ಎಲ್ ನಿಂದ ಪಡೆದುಕೊಳ್ಳಲಾಯಿತು. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–96 ಎಂದು ಗುರುತಿಸಲಾಯಿತು.

4. ಮುಂದುವರೆದು, ದಿಃ–29.12.2020 ರಂದು ನನ್ನ ಹಿಂದಿನ ತನಿಖಾಧಿಕಾರಿಯವರು ಮುಖ್ಯೋಪಾಧ್ಯಯರು, ಛಾಯಾದೇವಿ ಶಾಲೆ, ರಾಜೇಂದ್ರ ನಗರ ರವರಿಗೆ ವಿನಯ್ ಅಲಿಯಾಸ್ ಪರೋಟ ಎಂಬುವವರ ಜನ್ಮ ದಿನಾಂಕ ಹಾಗೂ ಜಾತಿ ಧರ್ಮದ ಮಾಹಿತಿಯನ್ನು ನೀಡುವಂತೆ ಮನವಿ ಪತ್ರ ಸಲ್ಲಿಸಿದ

ದಾಖಲೆಯಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–73 ಎಂದು ಗುರುತಿಸಲಾಗಿರುತ್ತದೆ.

5. ದಿಃ– 02.01.2021 ರಂದು ನನ್ನ ಹಿಂದಿನ ತನಿಖಾಧಿಕಾರಿಯವರು ಪಿಐ ಸೆನ್ ಠಾಣೆ, ಮೈಸೂರುರವರಿಗೆ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಮೊಬೈಲ್ ಡಾಟ ಎಕ್ಸಟ್ರ್ಯಾಕ್ಟ್ ಮಾಡಿಕೊಡಲು ಕೋರಿರುವ ಮನವಿ ಪತ್ರವಾಗಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–97 ಎಂದು ಗುರುತಿಸಲಾಯಿತು.

6. ದಿಃ– 07.01.2021 ರಂದು ನನ್ನ ಹಿಂದಿನ ತನಿಖಾಧಿಕಾರಿಯವರು ಎಇಇ ಪಿಡಬ್ಲ್ಯೂಡಿ, ಮೈಸೂರುರವರಿಗೆ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡಲು ಕೋರಿರುವ ಮನವಿ ಪತ್ರವಾಗಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–76 ಎಂದು ಗುರುತಿಸಲಾಗಿರುತ್ತದೆ.

7. ದಿಃ– 12.01.2021 ರಂದು ಹಿಂದಿನ ತನಿಖಾಧಿಕಾರಿಯವರು ಏರ್ ಟೆಲ್ ಕಂಪನಿಗೆ ಮೊಬೈಲ್ ನಂಬರ್ಃ– 9972994028 ಹಾಗೂ 9845078044 ಮತ್ತು ಜಿಯೋ ಕಂಪನಿಯ ಮೊಬೈಲ್ ನಂಬರ್ಃ– 8660343740 ನಂಬರ್ ಗಳ ಕಾಲ್ ಡೀಟೆಲ್ಸ ಮತ್ತು ಕ್ಯಾಪ್ ಪಾರ್ ನೀಡುವಂತೆ ನೋಡೆಲ್ ಅಪೀಸರ್ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–98 ಮತ್ತು 99 ಎಂದು ಗುರುತಿಸಲಾಯಿತು.

8. ದಿ– 04.02.2021 ರಂದು ಮುಖ್ಯಸ್ಥರು, ನ್ಯಾಯ ವೈದ್ಯ ಶಾಸ್ತ್ರ, ಜೆ.ಎಸ್.ಎಸ್ ಮೆಡಿಕಲ್ ಕಾಲೇಜ್ ರವರು ತಮ್ಮ ಹಿಂದಿನ ತನಿಖಾಧಿಕಾರಿಯವರು

ವೈದ್ಯರಿಗೆ ಆರ್.ಎಫ್.ಎಸ್.ಎಲ್ ನ ವರದಿಯನ್ನು ಮತ್ತು ಮರಣೋತ್ತರ ಪರೀಕ್ಷೆಯ ವರದಿಯನ್ನು ಸಲ್ಲಿಸಿ ಮೃತನ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ನೀಡುವಂತೆ ಸಲ್ಲಿಸಿದ ಕೋರಿಕೆ ಪತ್ರವಾಗಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–100 ಎಂದು ಗುರುತಿಸಲಾಯಿತು.

9. ದಿಃ– 26.02.2021 ರಂದು ನನ್ನ ಹಿಂದಿನ ತನಿಖಾಧಿಕಾರಿಯವರು ಮುಖ್ಯಸ್ಥರು, ನ್ಯಾಯ ವೈದ್ಯ ಶಾಸ್ತ್ರ, ಜೆ.ಎಸ್.ಎಸ್ ಮೆಡಿಕಲ್ ಕಾಲೇಜ್‌ರವರಿಗೆ ಪ್ರಕರಣದಲ್ಲಿ ವಶಪಡಿಸಿಕೊಂಡ ವಸ್ತು ಮತ್ತು ಚಾಕುವನ್ನು ನೀಡಿ ಅಭಿಪ್ರಾಯ ವರದಿಯನ್ನು ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–83 ಎಂದು ಗುರುತಿಸಲಾಗಿರುತ್ತದೆ.

10. ದಿಃ– 10.03.2021 ರಂದು ನನ್ನ ಹಿಂದಿನ ತನಿಖಾಧಿಕಾರಿಯವರು ಮುಖ್ಯೋಪಾಧ್ಯಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಳ್ಳಿಕೆರೆ ಹುಂಡಿ ಚಾಮರಾಜನಗರ ತಾಲ್ಲೂಕುರವರಿಗೆ ರವಿ ಅಲಿಯಾಸ್ ಬಚ್ಚ ಎಂಬುವವರ ಜನ್ಮ ದಿನಾಂಕ ಇರುವ ಶಾಲಾ ದಾಖಲಾತಿ ನೀಡುವಂತೆ ಮನವಿ ಪತ್ರ ಸಲ್ಲಿಸಿದ ದಾಖಲೆಯಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–101 ಎಂದು ಗುರುತಿಸಲಾಯಿತು.

11. ದಿಃ– 10.11.2024 ರಂದು ಈ ಪ್ರಕರಣದಲ್ಲಿ ಪೋಟೋಗಳನ್ನು ತೆಗೆದ ಬಗ್ಗೆ ಸತೀಶ್ ಬಿನ್ ರಾಮಚಂದ್ರರವರಿಂದ ಕಲಂ 65–ಬಿ ಅಡಿಯ ಪ್ರಮಾಣ ಪತ್ರವನ್ನು ನಾನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ

ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–102 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಶಾನೆ ಪಿ–102(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

12. ಈ ಪ್ರಕರಣದಲ್ಲಿ ನಾನು ಹೆಚ್ಚುವರಿ ದೋಷರೋಪಣ ಪಟ್ಟಿಯನ್ನು ಸಲ್ಲಿಸುವ ಕಾಲಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದ್ದು, ವಿಚಾರಣಾ ಹಂತದಲ್ಲಿತ್ತು ಎಂದರೆ ಸರಿ. ಹೆಚ್ಚುವರಿ ತನಿಖಾಕಾಲದಲ್ಲಿ ಮಣಿಕಂಠರವರ ಹೇಳಿಕೆಯನ್ನು ನಾನು ದಾಖಲಿಸಿಕೊಂಡಿರುತ್ತೇನೆ. ಹೇಳಿಕೆಯಲ್ಲಿ ಮನೆ ನಂಬರ್ಃ– 50 ಕ್ಕೆ ಸಂಬಂಧಪಟ್ಟಂತೆ ರಾಜ್ ಗೋಪಲ್ ರವರಿಗೆ ಮಂಜೂರಾಗಿದ್ದು, ರಾಜ್ ಗೋಪಾಲ್ ರವರು ಸುನಿಲ್ ರವರಿಗೆ ದಿಃ– 15.03.2008 ಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನಂತರ ಸುನಿಲ್ ಅದನ್ನು ದಿಃ– 17.11.2008 ರಂದು ಕುರಿ ಮಂಡಿಯ ವಡಿವೇಲುರವರ ಮಗ ದೊರೆಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳಿದ್ದು, ಈ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಪಡೆದುಕೊಂಡಿರುತ್ತೀರೆಯೇ? ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ರಾಜ್ ಗೋಪಲ್, ದೊರೆರವರನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ.

13. ಹೇಳಿಕೆಯಲ್ಲಿ 2016 ರಲ್ಲಿ ಮೃತ ರವಿಗೆ ಮನೆಯನ್ನು ಬಾಡಿಗೆ ನೀಡಲಾಗಿತ್ತು ಎಂದು ಹೇಳಿದ್ದು ಅದಕ್ಕೆ ಸಂಬಂಧಪಟ್ಟ ದಾಖ್ಗಲೆಗಳನ್ನು ಪಡೆದುಕೊಂಡಿರುತ್ತೀರಿಯೇ? ಎಂದರೆ ಸಾಕ್ಷಿ ನನ್ನ ತನಿಖ ಕಾಲದಲ್ಲಿ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ ನಿಶಾನೆ ಪಿ–95 ರಿಂದ 98 ದಾಖಲೆಗಳನ್ನು ಪ್ರಕರಣಕೋಸ್ಕರ ಸೃಷ್ಟಿ ಮಾಡಿರುತ್ತೇನೆ

**ಎಂದರೆ ಸರಿಯಲ್ಲ. ಮಣಿಕಂಠರವರ ಮುಂದುವರೆದ ಹೇಳಿಕೆಯನ್ನು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.**

ಮರುವಿಚಾರಣೆಃ**–** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು**)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**